# ಗಣಿತ
# MATHEMATICS

## ಭಾಗ - 1
### PART 1

## ತರಗತಿ II
### Standard II

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

II

# ಗಣಿತ

*Prepared by*

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First Edition - 2025
Printed at : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಗಣಿತ ಕಲಿಕೆಯನ್ನು ರಸವತ್ತಾಗಿ ಮಾಡಲು
ವೈವಿಧ್ಯಪೂರ್ಣವಾದ ಸಂಪನ್ಮೂಲಗಳನ್ನು ಒಳಗೊಂಡು
ಎರಡನೆಯ ತರಗತಿಯ ಗಣಿತ ಪಾಠ ಪುಸ್ತಕವನ್ನು
ನಿಮಗಾಗಿ ತಯಾರಿಸಲಾಗಿದೆ.
ಇದರ ಚಟುವಟಿಕೆಗಳನ್ನು ಆಸ್ವಾದಿಸುತ್ತಾ ಪೂರ್ತಿಗೊಳಿಸಲು
ನಿಮಗೆ ಸಾಧ್ಯ. ಆ ಮೂಲಕ ಹೊಸ ಹೊಸ
ಅರಿವನ್ನು ನಿರ್ಮಿಸಲು ಸಾಧ್ಯವಿದೆ.
ಗಣಿತದ ಸಮಸ್ಯೆಗಳನ್ನು ಪರಿಹರಿಸಲು
ವಿಭಿನ್ನ ರೀತಿಗಳನ್ನು ಪರಿಚಯಿಸುವುದರೊಂದಿಗೆ
ಜ್ಞಾನದ ಉನ್ನತ ಮಟ್ಟಕ್ಕೆ ಏರಲು ಈ ಪುಸ್ತಕವು
ನಿಮಗೆ ಸಹಕಾರಿಯಾಗಲಿ ಎಂದು ಹಾರೈಸುತ್ತೇನೆ.

ಪ್ರೀತಿಪೂರ್ವಕ,

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ. ಕೇರಳ

# Textbook Development Team


## Advisor

**Dr. E. Krishnan**
Head (Rtd.) Department of Mathematics,
University College, Thiruvananthapuram

## Chairperson

**Dr. Narayananunni M.P.**
Senior Lecturer (Rtd.), DIET Malappuram

## Experts

**Dr. Jayadevan S.K.**
Senior Lecturer,
DIET Kannur

**K.R. Muraleedharan Pillai**
Senior Lecturer (Rtd.),
DIET, Kollam

**T. Suresh**
Senior Lecturer (Rtd.),
DIET, Kasaragod

**Dr. Ramesh Kumar P.**
Professor & Head (Rtd.)
University of Kerala, Thiruvananthapuram

## Members

**K.K. Sureshbabu**
Teacher (Rtd.),
Palayad Central JB School,
Palayad, Kannur

**Sajeevan C.V.**
LPSA, ALPS Kariyil,
Cheruvathoor,
Kasaragod

**Soudamini K.V.**
HM (Rtd.), GLPS Maithani,
Cheruvathoor,
Kasaragod

**C.G. Sreekumar**
HM, GLPS Nettayam,
Kollam

**Vinayachandran K.**
LPSA, Izzathul Islam ALPS
Chandera, Kasaragod

**Rajan Appyal**
HM, GLPS Kozhummal,
Kannur

**Kunjabdulla M.**
HM (Rtd.), Muyippoth MUPS,
Kozhikode

**Anoop K.P.**
HST Drawing, PMSAPTHSS
Kakkove, Malappuram

## Kannada Version

**Yatheesh Kumar Rai K**
Rtd. Principal, GHSS Bellur

**Yashoda K.A.**
HM, GLPS Chandragiri

**Shriharsha M.P.**
HM, GJBS Peral

---

## Academic Coordinator

**Dr. Meena S.**
Assistant Professor, SCERT Kerala



**State Council of Educational Research and Training (SCERT)**
Vidhyabhavan, Poojappura, Thiruvananthapuram 695 012



# ಅನುಕ್ರಮಣಿಕೆ




1 ಅಡುಗೆ ಕೋಣೆಯ ಆಕೃತಿಗಳು  8

2 ಕಣ್ಣು ಮುಚ್ಚಾಲೆ  22

3 ಉತ್ತಮ ನಾಡಿಗಾಗಿ ಉತ್ತಮ ಭವಿಷ್ಯಕ್ಕಾಗಿ  36

4 ಬಹುಮಾನದ ಪೆಟ್ಟಿಗೆ  56

5 ಒಂದಾಗಿ ಸೇರೋಣ ಒಟ್ಟಾಗಿ ಬೆಳೆಯೋಣ  68

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

ನಾನು...............................................................................................

..............................................................ತರಗತಿಯಲ್ಲಿ ಕಲಿಯುತ್ತೇನೆ.

ನನ್ನ ತಾಯಿ :

ನನ್ನ ತಂದೆ :

ನನ್ನ ಟೀಚರ್ :

ನನ್ನ ಶಾಲೆ :

ಫೋನ್ ನಂಬ್ರ :

ಆಧಾರ್ ನಂಬ್ರ :



1

# ಅಡುಗೆ ಕೋಣೆಯ ಆಕೃತಿಗಳು



ಅಡುಗೆಕೋಣೆಯಲ್ಲಿ ಯಾವ ಯಾವ ವಸ್ತುಗಳಿವೆ?
ಅವುಗಳೆಲ್ಲವೂ ಒಂದೇ ಆಕಾರದಲ್ಲಿ ಇವೆಯೇ?



ಈ ಆಕೃತಿಯಲ್ಲಿರುವವುಗಳಿಗೆ ● ಚಿಹ್ನೆ ಹಾಕಿರಿ.



ಈ ಆಕೃತಿಯಲ್ಲಿರುವವುಗಳಿಗೆ ✓ ಚಿಹ್ನೆ ಹಾಕಿರಿ.



ಈ ಆಕೃತಿಯಲ್ಲಿರುವವುಗಳಿಗೆ × ಚಿಹ್ನೆ ಹಾಕಿರಿ.

ಇತರ ಯಾವ ಆಕೃತಿಗಳು ಇವೆ?



ಈ ಆಕೃತಿಗಳು ತಮ್ಮೊಳಗಿರುವ ವ್ಯತ್ಯಾಸಗಳೇನು?
ಹೇಳಬಹುದೇ?






ಅಡುಗೆ ಕೋಣೆಯ ಪಾತ್ರೆಗಳನ್ನು ಚೆಲ್ಲಾಪಿಲ್ಲಿ ಮಾಡಿ ಬೆಕ್ಕು ಹೊರಗೆ ಓಡಿತು.
ನಮಿತ್ ಹಿಂಬಾಲಿಸಿದನು.

# ಬೆಕ್ಕು ಮತ್ತು ಇಲಿ.



ಬೆಕ್ಕಿಗೆ ಇಲಿ ಸಿಗಬಹುದೇ?

ಬೆಕ್ಕು ನುಸುಳಿ ಹೋದ ಈ ಆಕೃತಿಗಳ ಮೂಲಕ ನಮಿತ್ ನಿಹಾರ ಮತ್ತು ಗೆಳೆಯರು ನುಸುಳಿದರು.

ಯಾವ ಆಕೃತಿಯ ಮೂಲಕ ಸುಲಭದಲ್ಲಿ ನುಸುಳಿ ಹೋಗಬಹುದು?

## ಪಾತ್ರೆಗಳನ್ನು ತೆಗೆದಿರಿಸುವ.




ಮನೆಯಲ್ಲಿ ಹಲವು ತರದ ಪಾತ್ರೆಗಳು ಇವೆಯಲ್ಲವೇ.
ಒಂದೇ ಆಕೃತಿಯಲ್ಲಿರುವ ಪಾತ್ರೆಗಳನ್ನು ಗುಂಪು ಮಾಡಿರಿ.

ಚಿತ್ರದಲ್ಲಿರುವ ವಸ್ತುಗಳನ್ನು ನೋಡಿರಿ.
ಪ್ರತಿಯೊಂದು ವಸ್ತುವು ಯಾವ ಆಕೃತಿಯಲ್ಲಿದೆ?



ಯಾವ ಆಕೃತಿಯಲ್ಲಿರುವ ಪಾತ್ರೆಗಳು ಹೆಚ್ಚು? ✓ ಹಾಕಿರಿ.



 ಆಕೃತಿಯಲ್ಲಿರುವವುಗಳ ಸಂಖ್ಯೆ. --------------------

 ಆಕೃತಿಯಲ್ಲಿರುವವುಗಳ ಸಂಖ್ಯೆ. --------------------

 ಆಕೃತಿಯಲ್ಲಿರುವವುಗಳ ಸಂಖ್ಯೆ. --------------------



ಎರಡು ಆಕೃತಿಗಳು ಸೇರಿದವುಗಳು ಇವೆಯೇ?
ಎರಡು ಆಕೃತಿಗಳು ಸೇರಿದ ಒಂದು ಚಿತ್ರ ರಚಿಸಿರಿ.

## ತಿಂಡಿ ಅಂಗಡಿಯಲ್ಲಿ

ಆಟ ಆಡಿದ ಬಳಿಕ ಅವರು ಅಪ್ಪನ ಅಂಗಡಿಗೆ ತಲುಪಿದರು.
ಅಂಗಡಿಯಲ್ಲಿ ತಿಂಡಿಗಳನ್ನು ಅಚ್ಚುಕಟ್ಟಾಗಿ ಇರಿಸಿದ್ದರು.




 ಈ ಆಕೃತಿಯಲ್ಲಿರುವ ಬಿಸ್ಕೆಟ್ ಪಾಕ್ಕೇಟುಗಳು ಎಷ್ಟಿವೆ?

 ಈ ಆಕೃತಿಯಲ್ಲಿರುವವುಗಳೋ?

ಕಡುಬುಗಳನ್ನು
ಇರಿಸಿರುವುದನ್ನು ನೋಡಿರಿ.
ಈ ಚಿತ್ರದಲ್ಲಿ ಇನ್ನೂ 5 ಕಡುಬುಗಳನ್ನು ಕೂಡಾ ಬಿಡಿಸಿರಿ.



ಈಗ ಒಟ್ಟು ಎಷ್ಟು ಕಡುಬುಗಳು ಇವೆ? ☐

ಕಪಾಟಿನಲ್ಲಿ ಎಷ್ಟು ಕೇಕುಗಳಿವೆ? ☐

ಇದರೊಂದಿಗೆ ಇನ್ನೂ ಎಷ್ಟು ಕೇಕ್ ಗಳನ್ನು ರಚಿಸಿದರೆ
ಈಗ ಇರುವ ಕಡುಬುಗಳ ಸಂಖ್ಯೆಗೆ ಸಮಾನವಾಗುವುದು?

ಹಲವು ಆಕೃತಿಗಳನ್ನು ಉಪಯೋಗಿಸಿ  ನಮಿತ್ ಮತ್ತು ನಿಹಾರ ರಚಿಸಿದ ಚಿತ್ರಗಳನ್ನು ನೋಡಿರಿ.
ಒಂದೇ ರೀತಿಯಲ್ಲಿರುವ ಆಕೃತಿಗಳಿಗೆ ಒಂದೇ ಬಣ್ಣ ನೀಡಿ ಚಿತ್ರವನ್ನು ಅಂದಗೊಳಿಸಿರಿ.





# ಚುಕ್ಕೆಗಳಿಂದ ರಚಿಸಿದ ಆಕೃತಿಗಳು

ಪ್ರತಿಯೊಂದು ಆಕೃತಿಯನ್ನು ರಚಿಸಲು ಎಷ್ಟು ಚುಕ್ಕೆಗಳನ್ನು ಜೋಡಿಸಿರುವಿರಿ? ಸಂಖ್ಯೆ ಬರೆಯಿರಿ.







ಮೇಲಿನ ಪ್ರತಿಯೊಂದು ಆಕೃತಿಗಳನ್ನು ರಚಿಸಲು ಎಷ್ಟು ಚುಕ್ಕೆಗಳನ್ನು ಜೋಡಿಸಲಾಗಿದೆ? ಸಂಖ್ಯೆ ಬರೆಯಿರಿ.



ಪ್ರತಿಯೊಂದು ಆಕೃತಿಯೊಳಗೆ ಎಷ್ಟು ಚುಕ್ಕೆಗಳಿವೆ? ಸಂಖ್ಯೆ ಬರೆಯಿರಿ.



## ಆಕೃತಿಗಳನ್ನು ರಚಿಸುವ.

12 ಚುಕ್ಕೆಗಳನ್ನು ಜೋಡಿಸಿ ಈ ಆಕೃತಿಯನ್ನು ರಚಿಸಿರಿ.
ಯಾವ ಯಾವ ರೀತಿಯಲ್ಲಿ ರಚಿಸಬಹುದು?

ಅತಿ ಕಡಿಮೆಯೆಂದರೆ ಎಷ್ಟು ಚುಕ್ಕೆಗಳನ್ನು ಜೋಡಿಸಿ ಈ ಆಕೃತಿಯನ್ನು ಬಿಡಿಸಬಹುದು?

ಒಳಗೆ 6 ಚುಕ್ಕೆಗಳು ಬರುವಂತೆ ಈ ಆಕೃತಿಯನ್ನು ರಚಿಸಿರಿ.

ಚುಕ್ಕೆಗಳನ್ನು ಜೋಡಿಸಿ ಈ ಆಕೃತಿಯನ್ನು ರಚಿಸಿರಿ.
ಎಷ್ಟು ಚುಕ್ಕೆಗಳನ್ನು ಜೋಡಿಸಿದಿರಿ? ....................

ಈ ಆಕೃತಿಯನ್ನು ರಚಿಸಲು ಅತಿ ಕಡಿಮೆಯೆಂದರೆ ಎಷ್ಟು ಚುಕ್ಕೆಗಳನ್ನು ಜೋಡಿಸಬೇಕು? ಈ ಆಕೃತಿಗೋ?



ನಮಿತ್ ರಚಿಸಿದ ಆಕೃತಿಗಳನ್ನು ನೋಡಿರಿ.

ಪ್ರತಿಯೊಂದರಲ್ಲಿ ಇರುವ ▭ △ ◯ ಆಕೃತಿಗಳ ಸಂಖ್ಯೆಯನ್ನು ಕೆಳಗೆ ನೀಡಲಾದ ಆಕೃತಿಗಳ ಒಳಗೆ ಬರೆಯಿರಿ.





▭ △ ◯ ಇವುಗಳನ್ನು ಉಪಯೋಗಿಸಿ ಒಂದು ಆಕೃತಿಯನ್ನು ಬಿಡಿಸಿರಿ.

ನಮಿತ್ ವ್ಯಾಯಾಮ ಮಾಡುವ ಚಿತ್ರ ನೋಡಿರಿ.

ವ್ಯಾಯಾಮದ ಚಿತ್ರಗಳನ್ನು ಕಡ್ಡಿ ಚಿತ್ರಗಳಾಗಿ ಬಿಡಿಸಿರಿ.









## ನಿರ್ಮಿಸುವ.

ಕಾಗದದ ರಿಬ್ಬನುಗಳನ್ನು ಜೋಡಿಸಿ ಅಂಟಿಸಿ ವಿವಿಧ ಚಿತ್ರಗಳನ್ನು ರಚಿಸುವ.





## ಮುಂದಿನ ಚಿತ್ರವನ್ನು ಬಿಡಿಸಬಹುದೇ?

 ....................

 ....................

 ....................

 ....................



## ಐಸ್ ಕ್ರೀಂ

ಅಪ್ಪನು ಅಡುಗೆಯ ಕೋಣೆಯನು
ಸೇರುತ ತೆಗೆದನು ಪಾತ್ರೆಯನು
ತಯಾರು ಮಾಡಿದ ನಮಗಾಗಿ
ವ್ಯಾನಿಲ ಐಸ್ ಕ್ರೀಂ ರುಚಿಯಾಗಿ.

ಅಪ್ಪನು ಕೋಣೆಯ ತೊರೆದಾಗ
ಆಯತ ಪಾತ್ರೆಯ ಕಂಡಾಗ
ಐಸ್ ಕ್ರೀಂ ಮೆಲ್ಲನೆ ಹೊರಬಂತು
ಓಡುತ ಅದರಲಿ ಅಡಗಿತ್ತು.

ಗೋಪುರದಾಕೃತಿ ಪಾತ್ರೆಯನು
ನೋಡಲು ಹೊಂದಿತು ಪುಳಕವನು
ಐಸ್ ಕ್ರೀಂ ಅದರೆಡೆ ಸಾಗಿತ್ತು
ಪಾತ್ರೆಯ ಒಳಗಡೆ ಅವಿತಿತ್ತು.

ಉರುಟಾಕೃತಿಯ ಪಾತ್ರೆಯನು
ನೋಡಲು ತಾಳಿತು ಖುಷಿಯನ್ನು
ಸಾಗಿತು ವೇಗದಿ ಅದರೆಡೆಗೆ
ಅಡಗುವೆನೆನ್ನುತ ಅದರೊಳಗೆ.



ಪಾತ್ರೆಯು ಯಾವುದೆ ಆಗಿರಲಿ
ರೂಪವು ಜಗದೊಳು ಹಲವಿರಲಿ
ಹೊಂದುವುದದರ ರೂಪವನು
ಹೇಳುವೆ ಈತನ ಆಟವನು.






ಇಂದು ನಾವು ಕಣ್ಣುಮುಚ್ಚಾಲೆ ಆಡುವ...
ನಿಯಾ... 50 ರ ವರೆಗೆ ಎಣಿಕೆಮಾಡು...

2

# ಕಣ್ಣು ಮುಚ್ಚಾಲೆ




ನಿಯಾಳ ಮನೆಯ ಸುತ್ತಲೂ
ತುಂಬಾ ಮರಗಳಿವೆ.
ಒಳ್ಳೆಯ ತಂಪು ಮತ್ತು
ನೆರಳು ಇದೆ.

## ಎಣಿಸಿ ಆಡುವ.







ನಿಯಾ ಎಣಿಕೆಮಾಡಲು ಬಿಟ್ಟು ಹೋದ ಸಂಖ್ಯೆಗಳನ್ನು ಇಲ್ಲಿ ಬರೆಯಿರಿ.




ನಿಯಾ ಮೊದಲು ಜಾನ್ವಿಯನ್ನು ಕಂಡಳು.

ಜಾನ್ವಿ 30 ರಿಂದ ಎಣಿಸಲಾರಂಭಿಸಿದಳು. ಜಾನ್ವಿ ಎಣಿಸಿದ ಅನುಕ್ರಮವಾದ ಹತ್ತು ಸಂಖ್ಯೆಗಳನ್ನು ಬರೆಯಿರಿ.

ಗೆಳೆಯರೊಂದಿಗೆ ನೀವೂ ಆಡಿರಿ.

ಆಟದ ಮಧ್ಯೆ ರಸ್ತೆಯಲ್ಲಿ ದೊಡ್ಡ ಒಂದು ಶಬ್ದ ಕೇಳಿಸಿತು.




ಅವರು ಹಣ್ಣುಗಳನ್ನು ಚೀಲದಲ್ಲಿ ಹಾಕಿದರು.
ಪ್ರತಿಯೊಂದು ತರದ ಹಣ್ಣುಗಳನ್ನು ನಿಯಾ ಎಣಿಸಿ ನೋಡಿದಳು.

## ಪ್ರತಿಯೊಂದು ಎಷ್ಟಿವೆ?



ಸೇಬು



ಮಾವಿನ ಹಣ್ಣು



ಕಿತ್ತಳೆ

ಎಲ್ಲಾ ಮಾವಿನ ಹಣ್ಣುಗಳು ಮತ್ತು ಕಿತ್ತಳೆ ಹಣ್ಣುಗಳು ಸಿಕ್ಕಿದುವು.
ಒಟ್ಟು 45 ಸೇಬುಗಳು ಇದ್ದುವು.

ಇನ್ನು ಎಷ್ಟು ಸೇಬುಗಳು ಸಿಗಲು ಬಾಕಿ ಇದೆ?

ಯಾವ ಹಣ್ಣುಗಳು ಹೆಚ್ಚು ಇದ್ದವು?

ಯಾವುದು ಕಡಿಮೆ?

ಕಿತ್ತಳೆಗಿಂತ ಸೇಬು ಎಷ್ಟು ಹೆಚ್ಚು ಇದೆ?

# ಸಂಖ್ಯಾ ಆಟ

ಸೋಹನ್ ಮತ್ತು ನಿಯಾ ಸಂಖ್ಯಾ ಆಟದಲ್ಲಿ ತೊಡಗಿದರು.



ಒಂದನೇ ಆಟದಲ್ಲಿ ಸೋಹನನಿಗೆ 40 ಅಂಕಗಳು ಲಭಿಸಿದುವು.
ನಿಯಾಳಿಗೆ ಅದಕ್ಕಿಂತ 7 ಅಂಕಗಳು ಹೆಚ್ಚು ಲಭಿಸಿದುವು.

ನಿಯಾಳಿಗೆ ಸಿಕ್ಕಿದ್ದು ಎಷ್ಟು? 40 ಕ್ಕಿಂತಲೂ 7 ಹೆಚ್ಚು.

ಎರಡನೇ ಆಟದಲ್ಲಿ ನಿಯಾಳಿಗೆ 44 ಅಂಕಗಳು ಲಭಿಸಿದುವು.
ಸೋಹನನಿಗೆ ಅದಕ್ಕಿಂತಲೂ 14 ಅಂಕಗಳು ಕಡಿಮೆ ಲಭಿಸಿತು.

ಸೋಹನನಿಗೆ ಲಭಿಸಿದ್ದು ಎಷ್ಟು?

44 ಕ್ಕಿಂತ 14 ಕಡಿಮೆ.

ಮೂರನೇ ಆಟದಲ್ಲಿ ಸೋಹನ್ ಮತ್ತು ನಿಯಾಳಿಗೆ ಲಭಿಸಿದ ಅಂಕಗಳು 50 ಕ್ಕಿಂತ ಕಡಿಮೆ ಆಗಿದೆ.

ಅವರಿಗೆ ಲಭಿಸಿದ ಅಂಕಗಳೊಳಗಿನ ವ್ಯತ್ಯಾಸ 10 ಆಗಿದೆ.
ಪ್ರತಿಯೊಬ್ಬರಿಗೂ ಲಭಿಸಿದ ಅಂಕಗಳು ಎಷ್ಟು?

ನಿಯಾ ಸೋಹನ್

## ತರಗತಿ ಅಲಂಕರಿಸುವ.

ನಿಯಾ ಮತ್ತು ಸೋಹನ್ ತರಗತಿಯನ್ನು ಅಲಂಕರಿಸಲು ಬಣ್ಣದ ಕಾಗದದಲ್ಲಿ ಹಲವು ಆಕೃತಿಗಳನ್ನು ಕತ್ತರಿಸಿದರು.




ಕತ್ತರಿಸಿದ ಆಕೃತಿಗಳನ್ನು ಅವರಿಬ್ಬರೂ ಸಾಲಾಗಿ ಇರಿಸಿದರು.

 ಕ್ಕೆ 10 ಅಂಕಗಳು.  ಕ್ಕೆ 1 ಅಂಕಗಳು.

ಪ್ರತಿಯೊಬ್ಬರಿಗೆ ಸಿಕ್ಕಿದ ಅಂಕಗಳು ಎಷ್ಟು?

ನಿಯಾ  ☐ + ☐ = ☐

ಸೋಹನ್  ☐ + ☐ = ☐

ಯಾರಿಗೆ ಹೆಚ್ಚು ? ☐ ಎಷ್ಟು? ☐

ಅಂಕಗಳು ಸಮಾನವಾಗಲು ಸೋಹನ್ ಪ್ರತಿಯೊಂದು ಆಕೃತಿಯನ್ನು ಎಷ್ಟು ಕತ್ತರಿಸಬೇಕು?

 ...........  ...........

ಆಕೃತಿಗಳನ್ನು ಕತ್ತರಿಸಿ ಈ ರೀತಿ ಆಡಬಹುದಲ್ಲವೇ.

# ವಯಸ್ಸು ಎಷ್ಟು?




ಅಪ್ಪನ ವಯಸ್ಸು ಎಷ್ಟು? ☐

ಮಿಹಾಲಿಗೆ 3 ವಯಸ್ಸು.
ನಿಯಾಳ ವಯಸ್ಸು ಅದರ ಇಮ್ಮಡಿ ಆಗಿದೆ.

ನಿಯಾಳ ವಯಸ್ಸು ಎಷ್ಟು? ☐

ಇನ್ನು ಐದು ವರ್ಷ ಕಳೆಯುವಾಗ ಪ್ರತಿಯೊಬ್ಬರ ವಯಸ್ಸು ಎಷ್ಟಾಗಬಹುದು?

| | | |
|---|---|---|
| ಅಮ್ಮ | : | 40 ಕ್ಕಿಂತ 5 ವಯಸ್ಸು ಹೆಚ್ಚು - 45 |
| ಅಪ್ಪ | : | ............................................................ |
| ನಿಯಾ | : | ............................................................ |
| ಮಿಹಾಲ್ | : | ............................................................ |




ನಿಮ್ಮ ಮನೆಯಲ್ಲಿರುವವರ ವಯಸ್ಸನ್ನು ಬರೆಯಿರಿ.

| ಹೆಸರು | ವಯಸ್ಸು |
|---|---|
| | |
| | |
| | |
| | |

## ಕಂಪ್ಯೂಟರ್ ಗೇಮ್.



| | | | | | | | | | |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | 14 | 15 | 16 | | | | |
| 21 | | 23 | | 25 | 26 | 27 | 28 | 29 | 30 |
| 31 | 32 | | 34 | 35 | | 37 | | 39 | 40 |
| | | | | | | | | | |

ನಿಯಾ ಕಂಪ್ಯೂಟರ್ ನಲ್ಲಿ ಆಟ ಆಡುತ್ತಿದ್ದಾಳೆ. ಇಲ್ಲಿ ಕೆಲವು ಸಂಖ್ಯೆಗಳು ಬಿಟ್ಟು ಹೋಗಿವೆ.

23 ರ ಮುಂದಿನ ಸಂಖ್ಯೆ ಯಾವುದು? ☐

15 ರ ಹಿಂದಿನ ಸಂಖ್ಯೆ ಯಾವುದು? ☐

29 ರ ಮೇಲಿನ ಕೋಣೆಯಲ್ಲಿರುವ ಸಂಖ್ಯೆ ಯಾವುದು? ☐

39 ರ ಕೆಳಗಿನ ಕೋಣೆಯಲ್ಲಿರುವ ಸಂಖ್ಯೆ ಯಾವುದು? ☐

13, 33, 36, 46, 49 ಇವುಗಳನ್ನು ಕಂಪ್ಯೂಟರಿನಲ್ಲಿ ಸರಿಯಾದ ಕೋಣೆಗಳಲ್ಲಿ ಬರೆಯಿರಿ.

ಕಂಪ್ಯೂಟರಿನ ಕೆಲವು ಕೋಣೆಗಳನ್ನು ಕೆಳಗೆ ನೀಡಲಾಗಿದೆ.
ಖಾಲಿ ಇರುವ ಕೋಣೆಗಳಲ್ಲಿ ಸಂಖ್ಯೆಯನ್ನು ಬರೆಯಿರಿ.



ನಿಯಾ ಮತ್ತು ಗೆಳೆಯರು ಕಾರ್ಡುಗಳಿಂದ ಆಟ ಆಡುತ್ತಿದ್ದಾರೆ.
ಗೆಳೆಯರು ಜೊತೆ ಆಗಿರುವುದನ್ನು ನೋಡಿರಿ.
ಉಳಿದವರನ್ನು ಜೊತೆ ಸೇರಿಸಿರಿ.




ಪ್ರತಿಯೊಬ್ಬರಿಗೂ ಸಿಕ್ಕಿದ ಸಂಖ್ಯೆಗಳನ್ನು ಕಾರ್ಡಿನಲ್ಲಿ ಬರೆಯಿರಿ.



ಅವುಗಳನ್ನು ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಗೆ ಎಂಬ ಕ್ರಮದಲ್ಲಿ ಬರೆಯಿರಿ.

| | | | | |
|---|---|---|---|---|
| | | | | |

## ಜೊತೆಗೊಳಿಸಿರಿ.

ಒಂದೇ ಸಂಖ್ಯೆಗಳನ್ನು ಜೊತೆಗೊಳಿಸಿ ಗೆರೆ ಎಳೆಯಿರಿ.

| | |
|---|---|
| 4 ಹತ್ತುಗಳು | 28 ಒಂದುಗಳು. |
| 4 ಹತ್ತುಗಳು<br>6 ಒಂದುಗಳು. | 3 ಹತ್ತುಗಳು<br>ಒಂದು ಒಂದುಗಳು. |
| ಮೂವತ್ತೊಂದು<br>ಒಂದುಗಳು | 4 ಹತ್ತುಗಳು<br>4 ಒಂದುಗಳು. |
| ಒಂದುಹತ್ತು<br>ಒಂದು ಒಂಭತ್ತು | 40 ಒಂದುಗಳು. |
| 2 ಹತ್ತುಗಳು<br>8 ಒಂದುಗಳು. | 46 ಒಂದುಗಳು. |
| ನಲುವತ್ತ ನಾಲ್ಕು<br>ಒಂದುಗಳು. | 19 ಒಂದುಗಳು. |

## ಗುಂಪು ಮಾಡುವ.

ಒಂದೇ ಸಂಖ್ಯೆ ಬರುವ ಕಾರ್ಡುಗಳನ್ನು ತೆಗೆದವರು ಗುಂಪಾಗುವರು.

ನಲುವತ್ತ ಎಂಟು

20 ಮತ್ತು 16.

ಇಪ್ಪತ್ತೈದು.

40

50 ಕ್ಕಿಂತ 2 ಕಡಿಮೆ.

36

ನಾಲ್ಕುಹತ್ತುಗಳು ಮತ್ತು 8 ಒಂದುಗಳು.

ನಾಲ್ಕು ಹತ್ತುಗಳು

25

ನಲುವತ್ತು.

ಇಪ್ಪತ್ತು ಮತ್ತು ಐದು.

10 ಮತ್ತು 15.

| | |
|---|---|
| 30 ಮತ್ತು 6. | ಮೂವತ್ತಾರು. |
| 48 | ಇಪ್ಪತ್ತರೊಂದಿಗೆ ಇಪ್ಪತ್ತು ಸೇರಿದರೆ |

## ಗುಂಪುಗಳನ್ನು ಕಂಡುಹಿಡಿದು ಬರೆಯಿರಿ.

ಗುಂಪು ಒಂದು

ಗುಂಪು ಎರಡು.

ಗುಂಪು ಮೂರು.

ಗುಂಪು ನಾಲ್ಕು

ಇವುಗಳಲ್ಲಿ ಅತಿ ದೊಡ್ಡ ಸಂಖ್ಯೆ ಯಾವುದು? ☐

ಅತಿ ಚಿಕ್ಕ ಸಂಖ್ಯೆ ಯಾವುದು? ☐




ಬಿಳಿಯೂರು ಗ್ರಾಮ ಪಂಚಾಯತಿನ ಮನೆಗಳಲ್ಲಿ ಶುಚಿತ್ವ ಸ್ಪರ್ಧೆ ಇದೆ. ಈ ಬಾರಿ ಪ್ರಥಮ ಸ್ಥಾನ ಗಳಿಸಬೇಕು. ರೈಹಾನ್,ಮತ್ತು ರಿಯಾ,ಅಪ್ಪ,ಅಮ್ಮನೊಂದಿಗೆ ಮನೆಯನ್ನು ಶುಚಿಗೊಳಿಸಲು ತೊಡಗಿದರು.

3

# ಉತ್ತಮ ನಾಡಿಗಾಗಿ ಉತ್ತಮ ಭವಿಷ್ಯಕ್ಕಾಗಿ








# ಬಿಳಿಯೂರು ಗ್ರಾಮ ಪಂಚಾಯತು ಶುಚಿತ್ವ ಸ್ಪರ್ಧೆ

ಪ್ರಿಯರೇ,

ನಮ್ಮ ಬಿಳಿಯೂರು ಗ್ರಾಮ ಪಂಚಾಯತನ್ನು ಸಂಪೂರ್ಣ ಶುಚಿತ್ವ ಪಂಚಾಯತ್ ಆಗಿ ಬದಲಾಯಿಸಲು ತೀರ್ಮಾನಿಸಲಾಗಿದೆ.ಎಲ್ಲಾ ಮನೆಗಳು ಮತ್ತು ಸಂಸ್ಥೆಗಳು ಇದರಲ್ಲಿ ಭಾಗವಹಿಸಬೇಕು. ಚೆನ್ನಾಗಿ ಶುಚಿಮಾಡುವವರಿಗೆ ಬಹುಮಾನ ನೀಡಲಾಗುವುದು. ನಮ್ಮ ಊರನ್ನು ಶುಚಿತ್ವವುಳ್ಳ ಊರಾಗಿ ಬದಲಾಯಿಸಲು ನಿಮ್ಮೆಲ್ಲರ ಸಹಕಾರವನ್ನು ಕೇಳಿಕೊಳ್ಳುತ್ತೇವೆ.

ಇತೀ,

ಅಧ್ಯಕ್ಷರು
ಬಿಳಿಯೂರು ಗ್ರಾಮಪಂಚಾಯತು.

# ಸಾಮಗ್ರಿಗಳನ್ನು ಕೊಂಡುಕೊಳ್ಳುವ.



ಪ್ಲಾಸ್ಟಿಕ್ ವಸ್ತುಗಳನ್ನು ಬೇರ್ಪಡಿಸಿ ಇಡಬೇಕು. ಹಸುರು ಸೇನೆಗೆ ನೀಡಬೇಕು.

ಮನೆಯ ಶುಚೀಕರಣಕ್ಕೆ ಅವರು ಖರೀದಿಸಿದ ವಸ್ತುಗಳ ಬೆಲೆಯನ್ನು ನೋಡಿರಿ.

| ಬೆಲೆ ವಿವರ ಪಟ್ಟಿ | |
|---|---|
| ಲೋಶನ್ | 20 ರೂಪಾಯಿ |
| ಸಾಬೂನು | 10 ರೂಪಾಯಿ |
| ಮೋಪ್ | 60 ರೂಪಾಯಿ |
| ಹಿಡಿಸೂಡಿ | 30 ರೂಪಾಯಿ |

ಮಿನ್ನು 2 ಲೋಶನ್ ಗಳನ್ನು ಖರೀದಿಸಿದಳು.

ನಾನು ಲೆಕ್ಕ ಹಾಕಿದ್ದು.

20 + 20 = ☐ ರೂಪಾಯಿ

20 ರ ಇಮ್ಮಡಿಯಲ್ಲವೇ 40

ಒಂದು ಸಂಖ್ಯೆಗೆ ಅದೇ ಸಂಖ್ಯೆಯನ್ನು ಕೂಡಿಸಿದರೆ, ಆ ಸಂಖ್ಯೆಯ ಇಮ್ಮಡಿ ಸಿಗುವುದು.

ಆಮಿ 5 ಸಾಬೂನು ಖರೀದಿಸಿದಳು.




ಹಣ ಎಷ್ಟಾಯಿತು? ☐

ಹೇಗೆ ಕಂಡುಹಿಡಿದಿರಿ ಎಂದು ಹೇಳಿರಿ.



ಎರಡು ಹಿಡಿಸೂಡಿಯ ಬೆಲೆ. ☐ + ☐ = ☐



ಮೋಪಿನ ಬೆಲೆ

☐ ರೂಪಾಯಿ

# ಗೃಹ ಸಂದರ್ಶನ

ಹಸುರು ಸೇನೆಯ ಪ್ರಿಯಾ ಮತ್ತು ಕವಿತ ಮನೆಗಳಿಂದ ಮಾಲಿನ್ಯಗಳನ್ನು. ಸಂಗ್ರಹಿಸುತ್ತಿದ್ದಾರೆ.




| 45 | 46 | 47 | 48 | 49 | 50 | 51 | 52 | 53 | 54 | 55 | 56 | 57 |
|---|---|---|---|---|---|---|---|---|---|---|---|---|




ಎಷ್ಟು ಮನೆಗಳಿಗೆ ಹೋದೆವು? [ ]

ಎಷ್ಟು ಮನೆಗಳು ಬಾಕಿ ಇವೆ? [ ]

58 ರಿಂದ 99 ರ ವರೆಗೆ ಅನುಕ್ರಮವಾಗಿ ಬರೆಯಿರಿ.

| | | | | | | | | | | | | | |
|---|---|---|---|---|---|---|---|---|---|---|---|---|---|
| 58 | 59 | 60 | 61 | | | | | | | | 69 | 70 | 71 |
| | | | | | | | | | | | | | |
| | | | | | | | | | | | | | 99 |

ಮನೆಗೆ ಅಂಟಿಸಲು ಬಾಕಿ ಇರುವ
ಸ್ಟಿಕ್ಕರ್ ಗಳನ್ನು ಕವಿತ ಅನುಕ್ರಮವಾಗಿ ಇರಿಸುತ್ತಿದ್ದಾಳೆ.




ಆಗ ಗೆಳೆಯರು ಬಂದರು.
ಪ್ರತಿಯೊಬ್ಬರು ತೆಗೆದ ಸಂಖ್ಯೆಯನ್ನು ಅವರು ಗಟ್ಟಿಯಾಗಿ ಹೇಳಿದರು.



84
ಎಂಭತ್ತ ನಾಲ್ಕು

93
..............................
..............................





78
..............................
..............................

85
..............................
..............................





..............................
ತೊಂಭತ್ತ ಏಳು

..............................
..............................



## ಅನುಕ್ರಮವಾಗಿ ಬರೆಯಿರಿ.

| | | | | | | | |
|---|---|---|---|---|---|---|---|
| 84 | | | | | | | |
| | | | | | | | |

## ಸಂಖ್ಯಾ ಕಾರ್ಡುಗಳು

ರೈಹಾನ್ ಮತ್ತು ರಿಯಾ ಮನೆಯನ್ನು ಶುಚಿಗೊಳಿಸುವಾಗ ಒಂದು ಚೀಲ ಸಿಕ್ಕಿತು.




ಒಂದು ಕೆಂಪು ಕಾರ್ಡಿನ ಸಂಖ್ಯೆ ಮತ್ತು ಒಂದು ನೀಲಿ ಕಾರ್ಡಿನ ಸಂಖ್ಯೆಯನ್ನು ಕೂಡಿಸಿ ಅವರು ಹೊಸ ಸಂಖ್ಯೆ ಮಾಡಿದರು. ಅವುಗಳನ್ನು ನೋಡಿರಿ.

| | | | | |
|---|---|---|---|---|
| 57 | 81 | 68 | 79 | 47 |

ಇವುಗಳನ್ನು ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಗೆ ಎಂಬ ಕ್ರಮದಲ್ಲಿ ಬರೆಯಿರಿ.

| | | | | |
|---|---|---|---|---|
| | | | | |

ನೀವೂ ಈ ರೀತಿಯ ಸಂಖ್ಯೆಯನ್ನು ನಿರ್ಮಿಸಿರಿ.

| | | | | |
|---|---|---|---|---|
| | | | | |

ಇವುಗಳನ್ನು ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಗೆ ಎಂಬ ಕ್ರಮದಲ್ಲಿ ಬರೆಯಿರಿ.

| | | | | |
|---|---|---|---|---|
| | | | | |

ಇದೇ ರೀತಿ ಕಾರ್ಡುಗಳ ಸಂಖ್ಯೆಯನ್ನು ಕೂಡಿಸಿ
ಇತರ ಸಂಖ್ಯೆಗಳನ್ನು ಬರೆಯಿರಿ.

## ಒಂದುಗಳು ಮತ್ತು ಹತ್ತುಗಳು.

ಶುಚಿತ್ವ ಕ್ಲಬ್ಬಿನ ಸದಸ್ಯರು ಪೇಪರ್ ಸ್ಟ್ರೋ ತಯಾರಿಸಿದರು.
ಅವುಗಳನ್ನು 10 ರ ಕಟ್ಟುಗಳಾಗಿಯೂ ಬಿಡಿಯಾಗಿಯೂ ಇಟ್ಟರು.ಪ್ರತಿಯೊಬ್ಬರು ಇರಿಸಿದ್ದನ್ನು ನೋಡಿರಿ.ಸಂಖ್ಯೆ ಬರೆಯಿರಿ.

ಶ್ರೀಷ



4 ಹತ್ತುಗಳು 5 ಒಂದುಗಳು.
40 ಮತ್ತು 5

45

ಅನಿಕ



.....ಹತ್ತುಗಳು 3 ಒಂದುಗಳು.
......ಮತ್ತು 3

ನಂದು



.....ಹತ್ತುಗಳು.... ಒಂದುಗಳು.
...... ಮತ್ತು......

ಆರುಷ್



.....ಹತ್ತುಗಳು... ಒಂದುಗಳು.
...... ಮತ್ತು......

ಸಂಖ್ಯೆಗಳನ್ನು ಸಣ್ಣ ಸಂಖ್ಯೆಯಿಂದ ದೊಡ್ಡ ಸಂಖ್ಯೆಗೆ ಎಂಬ ಕ್ರಮದಲ್ಲಿ ಬರೆಯಿರಿ.

## ಒಟ್ಟಿಗೆ ಇರಿಸಿದಾಗ.

ಅದ್ವಿತ ಮತ್ತು ನಂದು ನಿರ್ಮಿಸಿದ ಪೇಪರ್ ಸ್ಟ್ರೋಗಳನ್ನು ನೋಡಿರಿ.



ಅದ್ವಿತ ಎಷ್ಟು ಪೇಪರ್ ಸ್ಟ್ರೋ ತಯಾರಿಸಿದಳು? ☐

ನಂದು ಎಷ್ಟು ಪೇಪರ್ ಸ್ಟ್ರೋ ತಯಾರಿಸಿದನು? ☐

ಒಟ್ಟು ಪೇಪರ್ ಸ್ಟ್ರೋ ಗಳು ಎಷ್ಟು? ☐

ಹೇಗೆ ಕಂಡುಹಿಡಿದಿರಿ?

ಗೆಳೆಯನು ಕಂಡು ಹಿಡಿದದ್ದು ಹೇಗೆ? ಹೇಳಿರಿ. ಬರೆಯಿರಿ.

## ಬ್ಯಾಡ್ಜ್ ತಯಾರಿಸುವ.

ಶುಚಿತ್ವ ಕ್ಲಬ್ಬಿನ  ಸದಸ್ಯರಿಗೆ ಬ್ಯಾಡ್ಜ್ ತಯಾರಿಸಿದರು.
ಅವುಗಳಿಗೆ ಬಣ್ಣ ಹಚ್ಚಿ ಅಂದಗೊಳಿಸಿರಿ.



## ಬ್ಯಾಡ್ಜಿನ ಸಂಖ್ಯೆಗಳನ್ನು ಕ್ರಮವಾಗಿ ಗೆರೆ ಎಳೆದು ಜೋಡಿಸಿರಿ. ಬರೆಯಿರಿ.




| | |
|---|---|
| 50 | 78 |
| | |
| | |
| | |
| | |
| | |
| | |
| | |
| | |
| | |
| | |
| | |



ಸಾವನ್ ಮತ್ತು ಗೆಳೆಯರು ಬ್ಯಾಡ್ಜ್‌ಗಳನ್ನು ತೆಗೆದಿರಿಸುತ್ತಿದ್ದಾರೆ.
50 ಬ್ಯಾಡ್ಜ್‌ಗಳನ್ನು ಎಣಿಸಿ ತೆಗೆದಿಟ್ಟರು.



ಬಾಕಿ ಇರುವವುಗಳನ್ನು ಎಣಿಸಿ ತೆಗೆದಿರಿಸಿರಿ.

50 ಮತ್ತು 1, 51
51 ಮತ್ತು 1, 52

50 + 1 = 51
51 + 1 = 52
52 + 1 = 53
53 + 1 = 54
.........................
.........................
.........................
.........................



ನಿವೇದ್ ಹೀಗೆ ಬರೆದನು.

ಸಫ ಇನ್ನೊಂದು ರೀತಿಯಲ್ಲಿ ಬರೆದಳು.



50 + 1 = 51
50 + 2 = 52
50 + 3 = 53
50 + 4 = 54
.........................
.........................
.........................
.........................

60 ಬ್ಯಾಡ್ಜ್‌ಗಳನ್ನು ತೆಗೆದಿರಿಸಿದರು.
60 ನ್ನು ಎಲ್ಲರೂ ಬೇರೆ ಬೇರೆ ರೀತಿಯಲ್ಲಿ ಹೇಳಿದರು.




## ಬರೆದು ನೋಡಿರಿ.



# ಶುಚಿಯಾದ ಮನೆ

'ಶುಚಿಯಾದ ಮನೆ' ಸ್ಪರ್ಧೆಯಲ್ಲಿ ಹೆಚ್ಚು ಮಾರ್ಕ್ ಗಳಿಸಿದ 5 ಮನೆಗಳ ಪಟ್ಟಿಯನ್ನು ನೋಡಿರಿ. ಮೊದಲ 5 ಸ್ಥಾನದವರನ್ನು ಕಂಡುಹಿಡಿದು ಪಟ್ಟಿ ಪೂರ್ತಿಗೊಳಿಸಿರಿ.

| ಮನೆಯ ಹೆಸರು | ಮಾರ್ಕು |
|---|---|
| ನೀಲಾಂಬರಿ | 89 |
| ಶ್ರೀಪಥ | 68 |
| ನೆರಳು | 99 |
| ಅತಿಥಿ | 90 |
| ಮೇಘಾಮೃತ | 71 |

| ಸ್ಥಾನ | ಮನೆಯ ಹೆಸರು | ಮಾರ್ಕು |
|---|---|---|
| ಒಂದು | | |
| ಎರಡು | | |
| ಮೂರು | | |
| ನಾಲ್ಕು | | |
| ಐದು | | |

ಒಂದನೇ ಸ್ಥಾನದವರಿಗೆ ಸಿಕ್ಕಿದ ಮಾರ್ಕು? ☐

ಇದು ಎರಡನೆ ಸ್ಥಾನದವರಿಗಿಂತ ಎಷ್ಟು ಹೆಚ್ಚಾಗಿದೆ? ☐

ಒಂದು ಮತ್ತು ಮೂರನೆಯ ಸ್ಥಾನ ಗಳಿಸಿದವರ ಮಾರ್ಕುಗಳು ತಮ್ಮೊಳಗಿರುವ ವ್ಯತ್ಯಾಸ ಎಷ್ಟು? ☐



'ಶುಚಿಯಾದ ಮನೆ' ಸ್ಪರ್ಧೆಯಲ್ಲಿ ಅಮೇಯಳ ಮನೆಯು ಪ್ರಥಮ ಸ್ಥಾನ ಗಳಿಸಿತು. 99 ಅಂಕಗಳು ಲಭಿಸಿದುವು.
ಎಲ್ಲರಿಗೂ ಸಂತೋಷವಾಯಿತು.






ಒಂದು ಮಾರ್ಕು ಕೂಡಾ ಸಿಕ್ಕಿದರೆ ಒಟ್ಟು ಎಷ್ಟು ಮಾರ್ಕು ಆಗುವುದು? ☐

**9 ಹತ್ತುಗಳು ಮತ್ತು 9 ಒಂದುಗಳು ಸೇರಿ 99**

**ಒಂದು ಕೂಡಾ ಸೇರಿದರೆ 99 ಮತ್ತು 1 ಸೇರಿ, 99 + 1 = 100**

**10** + **10** + **10** + **10** + **10** + **10** + **10** + **10** + **10** + **10**

.... + 10

ಅತಿ ಸಣ್ಣ ಮೂರಂಕೆ ಸಂಖ್ಯೆ

99+1



95+5

50+50

| | | |
|---|---|---|
| 5 ಹತ್ತುಗಳು **50** | 7 ಹತ್ತುಗಳು **70** | 9 ಹತ್ತುಗಳು **90** |
| 6 ಹತ್ತುಗಳು **60** | 8 ಹತ್ತುಗಳು **80** | 10 ಹತ್ತುಗಳು **100** |

# ನೂರರ ಅನಂತರ.







**100 ಮತ್ತು 5 ಸೇರಿ 105**

**101**

ನೂರು ಮತ್ತು ಒಂದು ಸೇರಿ ನೂರಒಂದು

**100+1**

**100 ರ ಅನಂತರ ಬರುವ ಸಂಖ್ಯೆ.**

**101**




**100 + 9 = 109**

| | |
|---|---|
| 100 + 1 = 101 | 100 + 1 = 101 |
| 101 + 1 = 102 | 100 + 2 = 102 |
| 102 + 1 = 103 | 100 + 3 = 103 |
| 103 + 1 = 104 | 100 + 4 = 104 |
| ............................... | ............................... |
| ............................... | ............................... |
| ............................... | ............................... |
| ............................... | ............................... |
| ............................... | ............................... |
| ............................... | ............................... |

109 ರ ಜೊತೆ 1 ಸೇರಿದರೆ ಎಷ್ಟು?

# ನೂರ ಹತ್ತು




100 + 10 = 110

109 + 1 = 110

109 ರ ಜೊತೆ 1 ಸೇರಿದರೂ 100 ರ ಜೊತೆ 10 ಸೇರಿದರೂ 110.

100 ಮತ್ತು 20 ಸೇರಿದರೆ 120. 100 ರ ಜೊತೆ 30 ಸೇರಿದರೆ 130.

100 ಕ್ಕಿಂತ 40 ಹೆಚ್ಚು ಇರುವ ಸಂಖ್ಯೆ 140.

100 + 80 = 180



## ಸಂಖ್ಯೆಗಳನ್ನು ಬರೆಯುವ.




| | | | | | | | | | |
|---|---|---|---|---|---|---|---|---|---|
| 101 | 102 | 103 | | 105 | | 107 | | | 110 |
| 111 | | | | | | | | 119 | |
| | 122 | | 124 | | | | 128 | | 130 |
| | | | | | | 137 | | | |
| | | | | | 146 | | | | 150 |

ಬಣ್ಣ ಇರುವ ಕೋಣೆಗಳ ಸಂಖ್ಯೆಗಳು ತಮ್ಮೊಳಗಿರುವ ಸಂಬಂಧ ಏನು?

5 ರಂತೆ ಹೆಚ್ಚುವ 5 ಸಂಖ್ಯೆಗಳಿಗೆ ಹಳದಿ ಬಣ್ಣ ನೀಡಿರಿ.

ಎಲ್ಲರೂ ಬಣ್ಣ ನೀಡಿರುವುದು ಒಂದೇ ಸಂಖ್ಯೆಗೆ ಆಗಿದೆಯೇ?

150 ರ ಬಳಿಕ ಬರುವ ಸಂಖ್ಯೆಗಳಲ್ಲಿ ಬಿಟ್ಟು ಹೋದವುಗಳನ್ನು ಬರೆದು ಪೂರ್ತಿಗೊಳಿಸಿರಿ.

| | | | | |
|---|---|---|---|---|
| 151 | 161 | 171 | | |
| 152 | | | | 192 |
| 153 | 163 | | 183 | |
| | | 174 | | 194 |
| | 165 | | | 195 |
| 156 | | | 186 | |
| | | | | 197 |
| 158 | | 178 | | |
| 159 | 169 | | | |
| 160 | | | 190 | 200 |

**199 ಮತ್ತು 1 ಸೇರಿ**

**199 + 1 = 200**

ನೂರು ಮತ್ತು ನೂರು ಸೇರಿದರೆ



**190 ಕ್ಕೆ 10**
**ಕೂಡಿಸಿದಾಗ?**

ಅಮ್ಮಾ
ಇದನ್ನು ಹೇಳಿ
ಕೊಡುವೆಯಾ...
ಪ್ಲೀಸ್....

190 ಎಂದರೆ
100 ಮತ್ತು 90.
190 ಕ್ಕೆ 10 ಕೂಡಿಸಿದಾಗ
100 ಮತ್ತು 90 ಮತ್ತು 10
**100 + 90 + 10**
100 ಮತ್ತು 100 ಇನ್ನೂರು.
**100 + 100 = 200**



## ಅನುಕ್ರಮವಾಗಿ ಬರೆಯುವ.

ಅಶ್ವಿನಿ ನಂಬ್ರಗಳನ್ನು ಅನುಕ್ರಮವಾಗಿ ಬರೆದಳು.

ಉಳಿದವುಗಳನ್ನು ಕಂಡುಹಿಡಿದು ಇದೇ ಕ್ರಮದಲ್ಲಿ ಬರೆಯಿರಿ.

| | | | | | | | | | |
|---|---|---|---|---|---|---|---|---|---|
| 110 | 120 | 130 | 140 | | | | | | |










$100 + 10 = 110$

$100 + 20 = 120$

$100 + 30 = 130$

$100 + 40 = 140$

$100 + 50 = 150$

$100 + 60 = 160$

................................

................................

................................

$100 + 100 = 200$

# ಗಣಿತ ರಸಪ್ರಶ್ನೆ

ನಿಮಿಷ ಮತ್ತು ಗೆಳೆಯರು ಗಣಿತ ಕ್ಲಬ್ಬಿನ ಬೋರ್ಡಿನಲ್ಲಿ ಬರೆದ ರಸಪ್ರಶ್ನೆಗಳನ್ನು ಓದಿದರು.

**ಉತ್ತರ ಬರೆಯಿರಿ.**




ಹೆಚ್ಚು ಪ್ರಶ್ನೆಗಳನ್ನು ಕಂಡುಹಿಡಿದು ಬರೆಯಿರಿ.
ಉತ್ತರ ಬರೆಯಲು ಮರೆಯದಿರಿ.



# 4

# ಬಹುಮಾನದ ಪೆಟ್ಟಿಗೆ



ಫಿಸಿನ್ ಮತ್ತು ಫಿಸ
ಮಾವನನ್ನು ಕಾಯುತ್ತಿದ್ದಾರೆ.




ಪೊಟ್ಟಣದಲ್ಲಿ ಏನಾಗಿರಬಹುದು?

## ಹಣದ ಕುಡಿಕೆ.




ಇಬ್ಬರು ನಾಣ್ಯಗಳು ಮತ್ತು ನೋಟುಗಳನ್ನು ಎಣಿಸಿಟ್ಟರು.

**ಫಿಸಿನ್**



ಎಷ್ಟು ರೂಪಾಯಿ? ☐

**ಫಿಸ**



ಎಷ್ಟು ರೂಪಾಯಿ? ☐

## ಯಾವ ಯಾವ ನೋಟುಗಳು?




ನೀವು ಯಾವುದೆಲ್ಲಾ ನೋಟುಗಳನ್ನು ನೋಡಿರುವಿರಿ? ಬರೆಯಿರಿ.

# ಎಷ್ಟು ರೂಪಾಯಿ?

ಪ್ರತಿ ಗುಂಪಿನಲ್ಲಿ ಒಟ್ಟು ಎಷ್ಟು ರೂಪಾಯಿಗಳು ಇದೆಯೆಂದು ಕಂಡುಹಿಡಿದು ಗೆರೆ ಎಳೆದು ಜೋಡಿಸಿರಿ.











100

20

50

40

30

## ಹಣ ತೆಗೆಯುವ.

ಫಿಸ ಮತ್ತು ಫಿಸಿನ್ ಮಾವನ ಜೊತೆಯಲ್ಲಿ ಪಟ್ಟಣಕ್ಕೆ ಹೋದರು.
ATM ನಿಂದ ಹಣ ತೆಗೆದರು.




**ATM ನಿಂದ ಸಿಕ್ಕಿದ ನೋಟುಗಳು.**



ನೂರು ರೂಪಾಯಿಯ ನೋಟುಗಳೆಷ್ಟು? ☐

ಇನ್ನೂರು ರೂಪಾಯಿಯ ನೋಟುಗಳೆಷ್ಟು? ☐

## ಚಿಲ್ಲರೆ ಮಾಡುವ.

ಅವರು ಆಟೋದಲ್ಲಿ ಹತ್ತಿ ಸಂತೆಗೆ ತಲುಪಿದರು.




**ಸಿಕ್ಕಿದ ಚಿಲ್ಲರೆಗಳು.**



10 ರೂಪಾಯಿಯ ನೋಟುಗಳೆಷ್ಟು? ☐

ಎಲ್ಲವೂ 20 ರೂಪಾಯಿಯ ನೋಟುಗಳಾದರೆಯೋ? ☐

ಎಲ್ಲವೂ 5 ರೂಪಾಯಿಯ ನೋಟುಗಳಾದರೆಯೋ? ☐

# ಭಾರೀ ಬೆಲೆ ಕಡಿತ

ಮಕ್ಕಳೊಂದಿಗೆ ಮಾವ ಆಟಿಕೆ ಅಂಗಡಿಗೆ ತಲುಪಿದರು.




ಫಿಸಿನ್ 40 ರೂಪಾಯಿ ಬೆಲೆ ಇರುವ ಗೊಂಬೆಯನ್ನು ಪಡಕೊಂಡಳು.ಎಷ್ಟು ರೂಪಾಯಿ ನೀಡಬೇಕು?

ಉಳಿದವುಗಳ ಬೆಲೆಯನ್ನು ನೋಡಿರಿ. ಎಷ್ಟು ರೂಪಾಯಿ ನೀಡಬೇಕು?




**ಬೆಲೆ ವಿವರಗಳು**

| ಬೆಲೆ | ಅರ್ಧ ಬೆಲೆ |
|---|---|
| 10 ರೂಪಾಯಿ | |
| 20 ರೂಪಾಯಿ | 10 ರೂಪಾಯಿ |
| 100 ರೂಪಾಯಿ | |
| 50 ರೂಪಾಯಿ | |
| 40 ರೂಪಾಯಿ | |




ಇಬ್ಬರಿಗೂ ಇಷ್ಟವಾದ ಆಟಿಕೆಗಳು ಸಿಕ್ಕಿದುವು.

## ಆಟಿಕೆಗಳ ಬೆಲೆ.

ಇಬ್ಬರು ಖರೀದಿಸಿದ ಆಟಿಕೆಗಳನ್ನು ನೋಡಿದಿರಲ್ಲವೆ?

ಫಿಸಿನ್ ಖರೀದಿಸಿದ್ದು



ಒಟ್ಟು ☐ ರೂಪಾಯಿ

ಫಿಸ ಖರೀದಿಸಿದ್ದು



ಒಟ್ಟು ☐ ರೂಪಾಯಿ

ಆಟಿಕೆಗಳನ್ನು ಖರೀದಿಸಲು ಹೆಚ್ಚು ಹಣ ಕೊಟ್ಟವರು ಯಾರು?

☐

70 ರೂಪಾಯಿಗೆ ಯಾವುದೆಲ್ಲಾ ಆಟಿಕೆಗಳನ್ನು ಖರೀದಿಸಬಹುದು?

☐

# ಹಣದ ಲೆಕ್ಕ.

ಒಂದು ತಿಂಗಳ ಆನಂತರ ಫಿಸಿನ್ ಮತ್ತು ಫಿಸ ಹಣದ ಕುಡಿಕೆಯನ್ನು ತೆರೆದರು.ಎಷ್ಟು ರೂಪಾಯಿ ಇದೆ ಎಂದು ಎಣಿಸಿ ನೋಡಿದರು.




200 ರೂಪಾಯಿ ಆಗಲು ಎಷ್ಟು ಒಂದು ರೂಪಾಯಿಗಳು ಬೇಕು?

50 ರೂಪಾಯಿ ಆಗಲು ಎಷ್ಟು 10 ರೂಪಾಯಿಗಳು ಬೇಕು?

100 ರೂಪಾಯಿ ಆಗಲು ಎಷ್ಟು 10 ರೂಪಾಯಿಗಳು ಬೇಕು?

200 ರೂಪಾಯಿ ಆಗಲೋ?

## ಚಿಲ್ಲರೆ ಮಾಡುವ.




ಶೋಬಿನ್ 100 ರೂಪಾಯಿಯನ್ನು ಚಿಲ್ಲರೆ ಮಾಡಿದಾಗ ಈ ನೋಟುಗಳು ಲಭಿಸಿದುವು. ಪ್ರತಿಯೊಂದು ನೋಟುಗಳು ಎಷ್ಟರಂತೆ ಇರಬಹುದು?

| ನೋಟು | ಸಂಖ್ಯೆ |
|---|---|
| 5 ರೂಪಾಯಿ | |
| 10 ರೂಪಾಯಿ | |
| 20 ರೂಪಾಯಿ | |
| 50 ರೂಪಾಯಿ | |

## ಉಳಿತಾಯ ಕುಡಿಕೆ

ಫಿಸ

1 ರೂಪಾಯಿಯ ನಾಣ್ಯಗಳು 10. ☐

5 ರೂಪಾಯಿಯ ನಾಣ್ಯಗಳು 3. ☐

10 ರೂಪಾಯಿಯ ನೋಟುಗಳು 2. ☐

50 ರೂಪಾಯಿ ನೋಟು 1. ☐ ಒಟ್ಟು ☐

ಫಿಸಿನ್

5 ರೂಪಾಯಿಯ ನೋಟು 1. ☐

5 ರೂಪಾಯಿಯ ನಾಣ್ಯಗಳು 4. ☐

10 ರೂಪಾಯಿಯ ನೋಟುಗಳು 5. ☐ ಒಟ್ಟು ☐

ಯಾರ ಕುಡಿಕೆಯಲ್ಲಿ ಹೆಚ್ಚು ಮೊತ್ತ ಇದೆ? ☐

ಎಷ್ಟು ಹೆಚ್ಚು ಇದೆ? ☐

## ಪತ್ರಿಕಾ ವಾರ್ತೆ.



# ಚಿಕಿತ್ಸಾ ಸಹಾಯದ ಅಗತ್ಯವಿದೆ

ಚೆರುವನ್ನೂರು :ಪಿತ್ತಕೋಶದ ಅಸೌಖ್ಯದಿಂದ ಬಳಲುತ್ತಿರುವ ಆಸ್ಪತ್ರೆಯಲ್ಲಿ ದಾಖಲಾದ ಮಹಿಳೆಗೆ ಚಿಕಿತ್ಸಾ ಸಹಾಯದ ಅಗತ್ಯವಿದೆ.




ಫಿಸಿನ್ ಮತ್ತು ಫಿಸ ಅವರ ಕೈಯಲ್ಲಿದ್ದ 10 ರೂಪಾಯಿ ಮತ್ತು 5 ರೂಪಾಯಿಯ ನೋಟುಗಳನ್ನು ಚಿಕಿತ್ಸಾ ಸಹಾಯ ನಿಧಿಗೆ ನೀಡಿದರು.

ಕೊಟ್ಟ ಹಣ ಎಷ್ಟು? ☐



'**ನಿರವ್**' ಕುಟುಂಬಶ್ರೀ ಘಟಕದಲ್ಲಿ ಸಾಬೂನು ತಯಾರಿಸುತ್ತಿದ್ದಾರೆ. ಇಂದು ರಜೆ ಆದ್ದರಿಂದ ಮಾನವ್ ಅಮ್ಮನೊಂದಿಗೆ ಅಲ್ಲಿಗೆ ಬಂದನು.

# 5

# ಒಂದಾಗಿ ಸೇರೋಣ ಒಟ್ಟಾಗಿ ಬೆಳೆಯೋಣ



ಪ್ರತಿಯೊಬ್ಬರು ಎಣಿಸಿದ ಸಾಬೂನುಗಳನ್ನು ನೋಡಿರಿ.





ಶಾಂತ

ಹತ್ತರ ಗುಂಪುಗಳು. ____

ಒಂದುಗಳು. ____

ಒಟ್ಟು $10 + 3 =$ ____





ಲತ

ಹತ್ತರ ಗುಂಪುಗಳು. ____

ಒಂದುಗಳು. ____

ಒಟ್ಟು ____ + ____ = ____



ನಜ್ಮ

ಹತ್ತರ ಗುಂಪುಗಳು. ☐

ಒಂದುಗಳು. ☐

ಒಟ್ಟು ☐ + ☐ = ☐



ರೋಸಿ

ಹತ್ತರ ಗುಂಪುಗಳು. ☐

ಒಂದುಗಳು. ☐

ಒಟ್ಟು ☐ + ☐ = ☐

ಹತ್ತರ ಗುಂಪುಗಳು. ☐

ಒಂದುಗಳು. ☐

ಒಟ್ಟು ☐ + ☐ = ☐



ನಿಷ



ರೋಸಿ ಮತ್ತು ಶಾಂತ ಸೇರಿ ಎಷ್ಟು ಸಾಬೂನುಗಳನ್ನು ಎಣಿಸಿದರು?

☐ + ☐ = ☐

| | | |
|---|---|---|
| ರೋಸಿ ಎಣಿಸಿದ್ದು. |  |  |
| ಶಾಂತ ಎಣಿಸಿದ್ದು. | | |
| ಇಬ್ಬರು ಸೇರಿ ಎಣಿಸಿದ್ದು. | | |

$20 + 4 = 24$

$10 + 3 = 13$

$30 + 7 = 37$

$24 + 13 = 20 + 10 + 4 + 3$

20 ಮತ್ತು 10 ಸೇರಿ 30.

4 ಮತ್ತು 3 ಸೇರಿ 7.

30 ಮತ್ತು 7 ಸೇರಿ 37.

$20 + 4 = 24$
$10 + 3 = 13$
$30 + 7 = 37$

ಶಾಂತ ಮತ್ತು ನಜ್ಮ ಸೇರಿ ಎಷ್ಟು ಸಾಬೂನುಗಳನ್ನು ಎಣಿಸಿದರು?

$13 + 50 = 10 + 50 + 3 =$ ..........................

ಲತ ಮತ್ತು ನಿಷ ಸೇರಿ ಎಣಿಸಿದ ಸಾಬೂನುಗಳೆಷ್ಟು?

☐

## ಸಂಖ್ಯಾ ಮಾಲೆ.

**23 + 26** ಸಂಖ್ಯಾ ಮಾಲೆಯಲ್ಲಿ ನೀಡಿರುವುದನ್ನು ನೋಡಿರಿ.




ಉತ್ತರ ಬರೆಯಿರಿ.

**14 + 25** ಸಂಖ್ಯಾ ಮಾಲೆಯಲ್ಲಿ ಮಣಿಗಳನ್ನು ಬಿಡಿಸಿರಿ.



---

ಸಂಖ್ಯಾ ಮಾಲೆಯಲ್ಲಿ ಎಷ್ಟು ಮಣಿಗಳಿವೆ?

ಸಂಖ್ಯಾ ಮಾಲೆಯ ಸಂಖ್ಯೆಗಳು ಯಾವುದಾಗಿರಬಹುದು?



ಸಂಖ್ಯೆಗಳು ...... + ......

---

ಮಾನವ್ ಗೆ ಸಿಕ್ಕಿದ ಕಾರ್ಡುಗಳನ್ನು ನೋಡಿರಿ. 32 + 13

ಮಾಲೆಯಲ್ಲಿ ಪೋಣಿಸಲು ಎಷ್ಟು ಮಣಿಗಳು ಬೇಕು?

ಉಳಿದವರಿಗೆ ಸಿಕ್ಕಿದ ಕಾರ್ಡುಗಳನ್ನು ಕೆಳಗೆ ನೀಡಲಾಗಿದೆ.

16 + 42    35 + 14    22 + 67

ಪ್ರತಿಯೊಬ್ಬರಿಗೂ ಒಟ್ಟು ಎಷ್ಟು ಮಣಿಗಳು ಬೇಕೆಂದು ಕಂಡುಹಿಡಿಯಿರಿ.





ಮಾನವ್ ಮತ್ತು ಅವಿನ ಸಾಬೂನುಗಳನ್ನು ಪೆಟ್ಟಿಗೆಯಲ್ಲಿ ಇರಿಸಿರುವುದನ್ನು ನೋಡಿರಿ.




ಪ್ರತಿಯೊಬ್ಬರು ಪೆಟ್ಟಿಗೆಯಲ್ಲಿ ಇರಿಸಿದ್ದು ಎಷ್ಟು?

ಅವಿನ - 2 ಹತ್ತುಗಳು ಮತ್ತು 7 ಒಂದುಗಳು = 27

ಮಾನವ್ - 1 ಹತ್ತು ಮತ್ತು 5 ಒಂದುಗಳು = 15

ಇಬ್ಬರು ಸೇರಿ ಎಷ್ಟು ಸಾಬೂನುಗಳನ್ನು ಪೆಟ್ಟಿಗೆಯಲ್ಲಿ ಇರಿಸಿದರು?

27 ಮತ್ತು 15 ನ್ನು ಕೂಡಿಸಬೇಕು.

27 + 15

2 ಹತ್ತುಗಳು + 1 ಹತ್ತು + 7 ಒಂದುಗಳು + 5 ಒಂದುಗಳು.

ಇಬ್ಬರು ಸೇರಿ - 3 ಹತ್ತುಗಳು ಮತ್ತು 12 ಒಂದುಗಳು.

27 + 15

20 + 10 +7 +5

30 + 12 = 30 + 10 + 2 = 42

| | |
|---|---|
| 20 + 7 | = 27 |
| 10 + 5 | = 15 |
| 30 + 12 | = 42 |

ಹತ್ತುಗಳನ್ನು ಕೂಡಿಸಿದಾಗ.

2 ಹತ್ತುಗಳು + 1 ಹತ್ತು = 3 ಹತ್ತುಗಳು



20 10 = 30

ಒಂದುಗಳನ್ನು ಕೂಡಿಸಿದಾಗ.



7 + 5 = 12 ಒಂದುಗಳು = 1 ಹತ್ತು 2 ಒಂದುಗಳು

7 + 3 + 2 = 10 + 2 = 12

ಒಟ್ಟು ಸಾಬೂನುಗಳು.

4 ಹತ್ತುಗಳು + 2 ಒಂದುಗಳು




4 ಹತ್ತುಗಳು 2 ಒಂದುಗಳು 42

$40 + 2 = 42$

## ಸಾಬೂನುಗಳು ಎಷ್ಟು?

ಸಾಬೂನುಗಳ ಒಟ್ಟು ಸಂಖ್ಯೆಯನ್ನು ಕಂಡುಹಿಡಿದು ಬರೆಯಿರಿ.




☐ + ☐ = ☐

ಹೇಗೆ ಕಂಡುಹಿಡಿದಿರಿ? ☐

# ಬಿಲ್ಲೆಗಳನ್ನು ಇಟ್ಟು ಆಟ ಆಡುವ.

ಹರಿದ್ರ, ಅನ್ವಿದ್, ನೀತ ಮತ್ತು ಅಚಲ್ ಇವರು ಬಿಲ್ಲೆಗಳನ್ನಿಟ್ಟು ಆಟವಾಡತೊಡಗಿದರು. ಹರಿದ್ರ ಮತ್ತು ಅನ್ವಿದ್ ನಿಗೆ ಸಿಕ್ಕಿದ ಬಿಲ್ಲೆಗಳ ಚಿತ್ರವನ್ನು ನೋಡಿರಿ.




ಇಬ್ಬರಿಗೂ ಸೇರಿ ಒಟ್ಟು ಎಷ್ಟು ಬಿಲ್ಲೆಗಳು ಸಿಕ್ಕಿದುವು?



ಹರಿದ್ರ ☐ + ಅನ್ವಿದ್ ☐ = ☐

ನೀತ ಮತ್ತು ಅಚಲಿಗೆ ಒಟ್ಟು 68 ಬಿಲ್ಲೆಗಳು ಸಿಕ್ಕಿದುವು.
ಯಾವ ಗುಂಪು ಆಟದಲ್ಲಿ ಜಯ ಗಳಿಸಿತು?
ಅವರಿಗೆ ಎಷ್ಟು ಬಿಲ್ಲೆಗಳು ಹೆಚ್ಚು ಸಿಕ್ಕಿದುವು?
ಹೇಗೆ ಕಂಡುಹಿಡಿದಿರಿ? ಗೆಳೆಯರೊಡನೆ ಹೇಳಿರಿ.

ನೀತ ಮತ್ತು ಅಚಲಿಗೆ ಎಷ್ಟೆಷ್ಟು ಬಿಲ್ಲೆಗಳು ಸಿಕ್ಕಿರಬಹುದು?

| ನೀತಾ | ಅಚಲ್ |
|---|---|
| | |

| ನಾನು ಕಂಡುಹಿಡಿದದ್ದು. | ಗೆಳೆಯ ಕಂಡುಹಿಡಿದದ್ದು. |
|---|---|
| | |

ಎರಡನೆಯ ಆಟದಲ್ಲಿ ಒಂದನೇ ಗುಂಪಿಗೆ 48 ಬಿಲ್ಲೆಗಳು ಸಿಕ್ಕಿದುವು.
ಹರಿದ್ರನಿಗೆ ಲಭಿಸಿದ್ದಕ್ಕಿಂತಲೂ 4 ಬಿಲ್ಲೆಗಳು ಅನ್ವಿದ್ ನಿಗೆ ಹೆಚ್ಚು ಸಿಕ್ಕಿದುವು.

ಹರಿದ್ರನಿಗೆ ಎಷ್ಟು ಬಿಲ್ಲೆಗಳು ಲಭಿಸಿದುವು? ☐

ಅನ್ವಿದ್ ನಿಗೆ ಎಷ್ಟು ಬಿಲ್ಲೆಗಳು ಲಭಿಸಿದುವು? ☐

ಹೇಗೆ ಕಂಡುಹಿಡಿದಿರಿ? ತರಗತಿಯಲ್ಲಿ ಹೇಳಿರಿ. ಬರೆಯಿರಿ.

ಒಟ್ಟು ಇರುವ ಬಿಲ್ಲೆಗಳನ್ನು ಹತ್ತು ಮತ್ತು ಒಂದರ ಗುಂಪುಗಳಾಗಿ ಮಾಡಿದರೆ,

ಹತ್ತರ ಎಷ್ಟು ಗುಂಪುಗಳು ಇರಬಹುದು? ☐

ಒಂದರ ಎಷ್ಟು ಗುಂಪುಗಳು? ☐

ಎರಡನೇ ಗುಂಪಿಗೆ ಒಟ್ಟು 27 ಬಿಲ್ಲೆಗಳು ಸಿಕ್ಕಿದುವು. ನೀತಳಿಗೆ ಲಭಿಸಿದ್ದಕ್ಕಿಂತ ಅಚಲಿಗೆ 5 ಬಿಲ್ಲೆಗಳು ಕಡಿಮೆ ಲಭಿಸಿತು.

ನೀತಳಿಗೆ ಲಭಿಸಿದ ಬಿಲ್ಲೆಗಳು. ☐

ಅಚಲಿಗೆ ಲಭಿಸಿದ ಬಿಲ್ಲೆಗಳು. ☐

ಹೇಗೆ ಕಂಡುಹಿಡಿದಿರಿ? ನಿಮ್ಮ ಗುಂಪಿನಲ್ಲಿ ಹೇಳಿರಿ. ಬರೆಯಿರಿ.

## ಸಾಬೂನು ಖರೀದಿಸುವ.



ಮಿಯಾ ನಜ್ಮಳ ಕೈಯಿಂದ 13 ಸಾಬೂನುಗಳನ್ನು ಪಡಕೊಂಡಳು.
ಮೋಹಿತ್ ಅದರ ಇಮ್ಮಡಿ ಪಡಕೊಂಡನು.
ನಜ್ಮಳ ಎಷ್ಟು ಸಾಬೂನುಗಳು ಖರ್ಚಾದುವು?

| ನಾನು ಕಂಡುಹಿಡಿದದ್ದು. | ಗೆಳೆಯನು ಕಂಡುಹಿಡಿದದ್ದು. |
| --- | --- |
| | |




ಈ ರೀತಿ ಸಾಬೂನನ್ನು ಜೋಡಿಸಿಡಬೇಕು. 10 ಸಾಬೂನುಗಳನ್ನು ಜೋಡಿಸಿಟ್ಟ ಚಿತ್ರವನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬಿಡಿಸಿರಿ.

- ಇದೇ ರೀತಿಯಲ್ಲಿ 7 ಅಟ್ಟಿಗಳನ್ನು ಇಟ್ಟರೆ ಒಟ್ಟು ಎಷ್ಟು ಸಾಬೂನುಗಳು ಇರಬಹುದು?
- 10 ಅಟ್ಟಿ ಇಟ್ಟರೆಯೋ?

ಹೇಗೆ ಲೆಕ್ಕ ಮಾಡಿದಿರಿ? ಎಂದು ಗೆಳೆಯನೊಡನೆ ಹೇಳಿರಿ.

## ಬಾಯಿಲೆಕ್ಕ ಮಾಡೋಣ, ಹೇಳೋಣ.

ನೀತಳ ಅಮ್ಮ ಸಾಬೂನು ಖರೀದಿಸಲು 45 ರೂಪಾಯಿಗಳನ್ನು ನೀಡಿದಳು.

ನೀತಳ ಕೈಯಲ್ಲಿ 8 ರೂಪಾಯಿಗಳಿದ್ದುವು.

ಒಟ್ಟು ರೂಪಾಯಿಗಳೆಷ್ಟು?

45 + 8
40 + 5 + 8
40 + 13
40 + 10 + 3
= 50 + 3 = 53
ನಾನು ಈ ರೀತಿಯಲ್ಲಿ ಕಂಡುಹಿಡಿದೆನು.

8 ರೂಪಾಯಿ ಎಂದರೆ 5 ರೂಪಾಯಿ ಮತ್ತು 3 ರೂಪಾಯಿ ಅಲ್ಲವೇ. ನಾನು 45 ರೂಪಾಯಿಯೊಂದಿಗೆ 5 ಕೂಡಿಸಿದೆನು. ಆಗ 50 ರೂಪಾಯಿ ಆಯಿತು. 50 ರೊಂದಿಗೆ 3 ಕೂಡಿಸಿದಾಗ 53 ಆಗುವುದು.





## ಉತ್ತರ ಹೇಳಿರಿ.




## ಬಾಯಿಲೆಕ್ಕ ಮಾಡಿ ಕಂಡುಹಿಡಿದ ರೀತಿ

28 + 36 ಕಂಡುಹಿಡಿಯಲು ನೀವು ಬಾಯಿಲೆಕ್ಕ ಹಾಕಿದ ರೀತಿಯನ್ನು ✓ ಚಿಹ್ನೆ ಹಾಕಿರಿ.

| |
|---|
| 20 + 30=50 \| 8 + 6 = 14 \| 50 + 14 = 64 |
| 28 + 2 = 30 \| 30 + 34 = 64 |
| 36 + 4 = 40 \| 40 + 24 = 64 |
| 28 + 30 = 58 \| 58 + 6 = 64 |
| 20 + 30 + 8 + 6 = 50 + 14 = 64 |

ನೀವು ಕಂಡುಹಿಡಿದ ರೀತಿಯನ್ನು ಬರೆಯಿರಿ.

| |
|---|
| |

ಪಾರ್ಕಿಗೆ ತಲುಪಿದ ಮಾನವ್ ಮತ್ತು ಅವಿನ
ಚಹಾ ಅಂಗಡಿಯ ಬೋರ್ಡನ್ನು ನೋಡಿದರು.
'ನನ್ನ ಕೈಯಲ್ಲಿ 40 ರೂಪಾಯಿಗಳಿವೆ'. ಅವಿನ ಹೇಳಿದಳು.
ಈ ಹಣದಿಂದ ಏನನ್ನು ಕೊಂಡುಕೊಳ್ಳಬಹುದು?




ಅಲ್ಲಿ ಹಲವು ತರದ ಆಟಗಳು ಇದ್ದುವು.










ಅವಿನ ಉಯ್ಯಾಲೆ ಆಟದ ನಂತರ ಕಾರ್ ಓಟಕ್ಕೆ ಹೋದಳು.

ಎಷ್ಟು ರೂಪಾಯಿ ಬೇಕು? [ ]

ಹೇಗೆ ಕಂಡುಹಿಡಿದಿರಿ? [ ]

ಆಟದ ಬೋರ್ಡಿನಲ್ಲಿ ಬರೆದ ಸಂಖ್ಯೆಗಳು ಹೀಗಿವೆ.
ಖಾಲಿಬಿಟ್ಟ ಕೋಣೆಗಳನ್ನು ಪೂರ್ತಿಗೊಳಿಸಿರಿ.

| | +3 | +5 | +8 | +9 |
|---|---|---|---|---|
| 10 | 13 | | | |
| 30 | | 35 | | |
| 40 | | | | |
| 50 | | | 58 | |
| 70 | | | | |
| 80 | | | | |
| 90 | | | | |






ಸ್ಕೂಲ್ ಸ್ಟೋರಿನಿಂದ ಅವಿನ ಮತ್ತು ಮಾನವ್ ಪುಸ್ತಕಗಳನ್ನು ಖರೀದಿಸಿದರು. ಅವಿನ ಖರೀದಿಸಿದ ಎರಡು ಪುಸ್ತಕಗಳಿಗೆ 24 ರೂಪಾಯಿ ಮತ್ತು 23 ರೂಪಾಯಿ ಬೆಲೆ ಆಗಿತ್ತು. ಮಾನವ್ 32 ರೂಪಾಯಿ ಮತ್ತು 16 ರೂಪಾಯಿಯ ಪುಸ್ತಕಗಳನ್ನು ಖರೀದಿಸಿದನು. ಹೆಚ್ಚು ಹಣವನ್ನು ಕೊಟ್ಟವರು ಯಾರು? ಎಷ್ಟು ಹೆಚ್ಚು?

## ಪುಗ್ಗೆಗಳಿಗೆ ಬಣ್ಣ ಹಚ್ಚಿರಿ.

ಸಮಾನ ಮೊತ್ತವಿರುವ ಪುಗ್ಗೆಗಳಿಗೆ ಒಂದೇ ಬಣ್ಣ ಹಚ್ಚಿರಿ.



## ಚೌಕದ ಲೆಕ್ಕ.

ಪ್ರತಿಯೊಂದರ ಮೊತ್ತವನ್ನು ಆಯಾ ಕೋಣೆಗಳಲ್ಲಿ ಬರೆಯಿರಿ.







ಒಂದೇ ಬಣ್ಣವಿರುವ ಕೋಣೆಗಳಲ್ಲಿರುವ ಸಂಖ್ಯೆಯನ್ನು ಕೂಡಿಸಿ
ಮಧ್ಯದ ಕೋಣೆಯಲ್ಲಿ ಬರೆಯಿರಿ.







ಈ ಮೇಲೆ ಮಾಡಿದಂತೆ ಇತರ ಎರಡಂಕೆ ಸಂಖ್ಯೆಗಳನ್ನು ಕೋಣೆಗಳಲ್ಲಿ ಬರೆಯಿರಿ.ಆ ಸಂಖ್ಯೆಗಳನ್ನು ಕೂಡಿಸಿ ಮಧ್ಯದಲ್ಲಿರುವ ಕೋಣೆಯಲ್ಲಿ ಬರೆಯಿರಿ.





# ಗೆರೆಯ ಆಟಗಳು.




ಗೆರೆ ಎಳೆದು ಜೋಡಿಸಿದ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಿರಿ.

32 + 34 = 

ಸಿಕ್ಕಿದ ಸಂಖ್ಯೆಗಳನ್ನು ಇಲ್ಲಿ ಬರೆಯಿರಿ.

ಸಂಖ್ಯೆಗಳಿಗೆ ಏನಾದರೂ ವಿಶೇಷತೆ ಇದೆಯೇ?

ಹೇಳಿರಿ. ಬರೆಯಿರಿ.

ಇದೇ ರೀತಿಯ ಇತರ ಎರಡಂಕೆ ಸಂಖ್ಯೆಗಳು ಯಾವುವು?

ಅಂಕೆಗಳು ಆವರ್ತಿಸಿ ಬರುವ ಎಷ್ಟು ಎರಡಂಕೆ ಸಂಖ್ಯೆಗಳಿವೆ?



# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in